ಯೋಜನೆಯಡಿಯಲ್ಲಿ ಸುಮಾರು ಶೇಕಡ 17ರಷ್ಟನ್ನು ನಾವು ಕೆಲವೊಂದು ಜಿಲ್ಲೆಗಳಲ್ಲಿ ಮತೀಯ ಅಲ್ಪಸಂಖ್ಯಾತರಿಗೆ ಕೊಟ್ಟಿದ್ದೇವೆ. ಕೆಲವು ಜಿಲ್ಲೆಗಳಲ್ಲಿ ಅಷ್ಟು ಮೀಸಲಾತಿ ನೀಡಿಲ್ಲವೆಂಬುದು ನನಗೆ ಗೊತ್ತು. ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪಿಎಂಆರ್‌ವೈ ನಲ್ಲಿ ಅಷ್ಟು ಮೀಸಲಾತಿ ನೀಡಲಾಗಿಲ್ಲ. ನಾನು ಮೊನ್ನೆ ತಾನೇ ಅಲ್ಲಿಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿದ್ದೇನೆ. ನಾವು ನಿರೀಕ್ಷಿಸಿದಷ್ಟು ಪ್ರಗತಿ ಪಿಎಂ ಆರ್‌ವೈ ನಲ್ಲಿ ಅಲ್ಲಿ ಆಗಿಲ್ಲ. ನಾನು ಅದರ ಬಗ್ಗೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳಿಂದ ಸಮಜಾಯಿಷಿ ಕೇಳಿದ್ದೇನೆ. ಅದರ ಬಗ್ಗೆ ಕ್ರಮ ಜರುಗಿಸುತ್ತೇನೆ.

ಮಾಂಗಲ್ಯ ಭಾಗ್ಯ ಯೋಜನೆ

163 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಂಗಲ್ಯ ಭಾಗ್ಯ ಯೋಜನೆ ಎಂದಿನಿಂದ ಜಾರಿಗೆ ಬಂದಿರುತ್ತದೆ? (ವಿವರಗಳನ್ನು ನೀಡುವುದು).

ಆ) 1998-99ನೇ ಸಾಲಿನಲ್ಲಿ ಈ ಯೋಜನೆಗೆ ನಿಗದಿಪಡಿಸಿದ ಹಣವೆಷ್ಟು?

ಶ್ರೀ ಮಾಲೀಕಯ್ಯ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಮತ್ತು ಆ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ತಂದೆ ತಾಯಿಗಳಿಗೆ ಅವರ ಮೊದಲನೇ ಮಗಳ ಮದುವೆ ನಡೆಸುವ ಸಲುವಾಗಿ 5000 ರೂ.ಗಳನ್ನು ಸಹಾಯಧನವನ್ನಾಗಿ ನೀಡುವ ಉದ್ದೇಶದಿಂದ 'ಮಾಂಗಲ್ಯಭಾಗ್ಯ' ಎಂಬ ಯೋಜನೆಯನ್ನು 98-99ನೇ ಸಾಲಿನಿಂದ ಜಾರಿಗೆ ತರಲು ಉದ್ದೇಶಿಸಲಾಗಿದೆ. ಇತರೆ ಯೋಜನೆಗಳಿಗೆ ಒದಗಿಸಿರುವ ಮೊತ್ತದಿಂದ ಮರು ಹೊಂದಾಣಿಕೆ ಮೂಲಕವಾಗಲೀ ಅಥವಾ ಹೆಚ್ಚುವರಿ ಅನುದಾನವನ್ನು ಪಡೆಯುವ ಮೂಲಕವಾಗಲೀ ಈ ಯೋಜನೆಯನ್ನು ಈ ಸಾಲಿನಿಂದ ಜಾರಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗ್ಗಡೆ (ಶ್ರೀ ಯು. ಬಿ. ಬಣಕಾರ್ ಅವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೇ, ಖಾಲಿ ಡಬ್ಬಿ ಬಹಳ ಶಬ್ದ ಮಾಡುತ್ತದಂತೆ. ಸರ್ಕಾರದ ಪರಿಸ್ಥಿತಿ ಹಾಗೆಯೇ ಆಗಿದೆ. ಹಿಂದುಳಿದ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಕುಟುಂಬದ ಸದಸ್ಯರಿಗೆ ಮೊದಲನೇ ಹೆಣ್ಣು ಮಕ್ಕಳಿಗೆ 5 ಸಾವಿರ ರೂ.ಗಳ ನೆರವು ನೀಡುತ್ತೇವೆಂದು ಸರ್ಕಾರ ಬಜೆಟ್‌ನಲ್ಲಿ ಹೇಳಿದೆ.'ಮಾಂಗಲ್ಯಭಾಗ್ಯ' ಎನ್ನುವಂತಹ ಈ ಒಂದು ಹೊಸ ಯೋಜನೆಯನ್ನು ಸರ್ಕಾರ ಈ ಬಾರಿ ಪ್ರಕಟ ಮಾಡಿದೆ. ಮಾನ್ಯ ಬಣಕಾರ್‌ರವರು ಇಲ್ಲಿ ಕೇಳಿರುವ 'ಮಾಂಗಲ್ಯ ಭಾಗ್ಯ' ಕ್ಕೆ ಎಷ್ಟು ಹಣ ತೆಗೆದಿರಿಸಿದ್ದೀರಿ ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸುತ್ತಾ ಇತರೇ ಯೋಜನೆಗಳಲ್ಲಿ ಒದಗಿಸಿರುವ ಮೊತ್ತದಿಂದ ಮರು ಹೊಂದಾಣಿಕೆ ಮೂಲಕವಾಗಲೀ ಅಥವಾ ಹೆಚ್ಚುವರಿ ಅನುದಾನ ಪಡೆಯುವ ಮೂಲಕವಾಗಲೀ ಈ ಯೋಜನೆಯನ್ನು ಪ್ರಾರಂಭಿಸುತ್ತೇವೆಂದು ಹೇಳಿದ್ದಾರೆ. ಅಂದರೆ ಯಾವುದೇ ಹಣಕಾಸಿನ ಅನುದಾನವನ್ನು ತೆಗೆದಿರಿಸದೆ

ಒಂದು ಯೋಜನೆಯನ್ನು ಪ್ರಾರಂಭ ಮಾಡಲಿಕ್ಕೆ ಸರ್ಕಾರ ಹೊರಟಿದೆ ಎಂದರೆ ಇದು ನಿಜಕ್ಕೂ ಹಾಸ್ಯಾಸ್ಪದವಾದುದು ಎಂದು ನಾನು ಭಾವಿಸುತ್ತೇನೆ. ಹಾಗಾಗಿ ನಿಶ್ಚಿತವಾಗಿ ಸರ್ಕಾರ ಈ ಸಂದರ್ಭದಲ್ಲಿ ಎಷ್ಟು ಹಣವನ್ನು ಇದಕ್ಕಾಗಿ ತೆಗೆದಿಟ್ಟಿದ್ದಾರೆ? ಎಷ್ಟು ಜನಕ್ಕೆ ಮಾಂಗಲ್ಯ ಭಾಗ್ಯವನ್ನು ಕೊಡುವುದಕ್ಕೆ ಬದ್ಧವಾಗಿದೆ ಎನ್ನುವಂತಹ ದೃಢ ನಿರ್ಧಾರನ್ನು ಇಲ್ಲಿ ಪ್ರಕಟಿಸಬೇಕು. ಅಂತಹ ನಿರ್ಧಾರವನ್ನು ಇಲ್ಲಿ ಪ್ರಕಟಿಸದಿದ್ದರೆ, ಇದು ಸುಳ್ಳು ಘೋಷಣೆ, ಪೊಳ್ಳು ಭರವಸೆ ಎಂದು ನಾವು ಭಾವಿಸಿಕೊಳ್ಳಬೇಕಾಗುತ್ತದೆ. ಹಣಕಾಸಿನ ನೆರವು ಇಲ್ಲದೆ ಹಣಕಾಸಿನ ಅನುದಾನ ತೆಗೆದಿರಿಸದೆ ಸರ್ಕಾರದವರು ಹೇಗೆ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುತ್ತಾರೆ?

ಶ್ರೀ ಕುಂಬ್ಳೆ ಸುಂದರರಾವ್ : ಕನ್ನಡದಲ್ಲಿ ಒಂದು ಗಾದೆ ಇದೆ, ಹಲ್ಲೂ ಇಲ್ಲ, ಕಡಲೆಯೂ ಇಲ್ಲ ಶಬ್ದ ಬಂದಿತು ಎಂದು. ಹಣವೂ ಇಲ್ಲ ಒದಗಿಸುವುದಕ್ಕೆ ವ್ಯವಸ್ಥೆಯೂ ಇಲ್ಲ. ಈ ರೀತಿಯಲ್ಲಿ ನೀವು ಈ ಯೋಜನೆ ಮಾಡಿ ಮಾಂಗಲ್ಯ ಭಾಗ್ಯ ಎಂದು ಘೋಷಣೆ ಮಾಡಿದಿರಿ. ಬಡ್ಜೆಟ್‌ನಲ್ಲಿ ಕೇಳುವುದಕ್ಕೆ ಚೆನ್ನಾಗಿತ್ತು. ಆದರೆ ಪರಿಣಾಮ ಏನು, ಒದಗಿಸುವ ವ್ಯವಸ್ಥೆ ಏನು, ಅದರಿಂದ ಬರೀ ಘೋಷಣೆ ಆಗಬಾರದು, ಹಣ ಒದಗಿಸಿ ಇದಕ್ಕೆ ಘೋಷಣೆ ಆಗಬೇಕು.

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ : ಗಂಡನನ್ನು ಕಳೆದುಕೊಂಡವರಿಗೆ ವೇತನ ಕೊಡುತ್ತಿದ್ದರು, ಅದು ಆರು ತಿಂಗಳಾದರೂ ಬಂದಿಲ್ಲ. ಮಾಂಗಲ್ಯವನ್ನು ಕೊಟ್ಟು ಮಾಂಗಲ್ಯವನ್ನು ಕಳೆದುಕೊಳ್ಳಿ ಎಂದು ಕೊಡುತ್ತಿದ್ದೀರಿ. ಮಾಂಗಲ್ಯ ಕೊಡುವುದು ಬರೀ ಪೊಳ್ಳು ಆಶ್ವಾಸನೆ ಇದು.

ಶ್ರೀ ಮಾಲೀಕಯ್ಯ ಗುತ್ತೇದಾರ್ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಹಾಗೆ ಕೇವಲ ಖಾಲಿ ಡಬ್ಬಿ ಘೋಷಣೆ ನಮ್ಮ ಸರ್ಕಾರದ್ದಲ್ಲ. ಈಗಾಗಲೇ ಇದಕ್ಕಾಗಿ ಒಂದೂವರೆ ಕೋಟಿ ರೂಪಾಯಿ ಹಣವನ್ನು ನಾವು ಇಟ್ಟಿದ್ದೇವೆ. ಒಂದು ಕೋಟಿ ಹಣ ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಮುಖಾಂತರ ಕೊಡುತ್ತಿದ್ದೇವೆ. ಈ ವರ್ಷ ಈ ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ 3,000 ಫಲಾನುಭವಿಗಳಿಗೆ ಈ ಯೋಜನೆಯ ಕಾರ್ಯಕ್ರಮದಲ್ಲಿ ತಂದು ಅವರಿಗೆ ಸೌಲಭ್ಯವನ್ನು ಒದಗಿಸುವ ಕಾರ್ಯಕ್ರಮವನ್ನು ಸರ್ಕಾರದಲ್ಲಿ ಹಾಕಿಕೊಂಡಿದ್ದೇವೆ. ಪ್ರತಿಯೊಂದು ಕ್ಷೇತ್ರವಾರು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಶಾಸಕರ ಕ್ಷೇತ್ರದಲ್ಲಿ 10 ರಿಂದ 15 ಜನರಿಗೆ ಗುರುತಿಸಿ 10 ಜನರು ಹಿಂದುಳಿದ ವರ್ಗದವರು ಅದರಲ್ಲಿ 5 ಜನರು ಪ್ರವರ್ಗ ಒಂದರಲ್ಲಿ ಇರತಕ್ಕಂತಹ ಫಲಾನುಭವಿಗಳು. ಇನ್ನು ಐದು ಜನ ಪ್ರವರ್ಗ ಎರಡರಲ್ಲಿ ಇರತಕ್ಕಂತಹ ಫಲಾನುಭವಿಗಳು. ಹೀಗೆ 10 ಜನರಿಗೆ ಹಿಂದುಳಿದ ವರ್ಗದ ಫಲಾನುಭವಿಗಳಿಗೆ ಕೊಡುತ್ತಿದ್ದೇವೆ. ಐದು ಜನ ಅಲ್ಪ ಸಂಖ್ಯಾತರಿಗೆ ಕೊಡುತ್ತಿದ್ದೇವೆ. ಒಂದೊಂದು ಕ್ಷೇತ್ರದಲ್ಲಿ 15 ಜನರನ್ನು ಈ ಯೋಜನೆಯಡಿಯಲ್ಲಿ ಮೊದಲನೇ ಮಗಳಿಗೆ ಸಹಾಯ ಮಾಡತಕ್ಕಂತಹ ಕಾರ್ಯಕ್ರಮವನ್ನು ಸರ್ಕಾರದಿಂದ ಜಾರಿಗೆ ತಂದಿದ್ದೇವೆ. ಮುಂದಿನ ತಿಂಗಳ ಒಂದನೇ ತಾರೀಖಿನಿಂದ ಈ ಕಾರ್ಯಕ್ರಮ ಜಾರಿಗೆ ಬರುತ್ತದೆ. ಇದಕ್ಕಾಗಿ ನಾವು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂತಹ ಸಂದರ್ಭದಲ್ಲಿ ಕ್ಷೇತ್ರವಾರು ಕೆಲವು

ಮಹಿಳೆಯರನ್ನು, ಆ ವರ್ಗದ ಪ್ರತಿನಿಧಿಗಳನ್ನು ನಾಮಿನೇಷನ್ ಮಾಡುತ್ತೇವೆ. ವಾರ್ಷಿಕ ಆಧಾಯ 22,000 ಇದ್ದವರಿಗೆ ಮಾತರ್ ಈ ಯೋಜನೆ ಲಭ್ಯವಾಗುತ್ತದೆ. ಅಂತಹವರನ್ನು ಆಯ್ಕೆ ಮಾಡಲು ನಾಲ್ಕು ಜನರ ಮಹಿಳಾ ಕಮಿಟಿ ಕೂಡ ನಾವು ಕ್ಷೇತ್ರವಾರು ಮಾಡುತ್ತಿದ್ದೇವೆ. ಈಗಾಗಲೇ ನಾವು ನಮ್ಮ ಅಧಿಕಾರಿಗಳ ಮುಖಾಂತರ ಮಾಹಿತಿ ತರಿಸಿಕೊಂಡಿದ್ದೇವೆ. ಮುಂದಿನ ತಿಂಗಳ ಒಂದನೇ ತಾರೀಖಿನಿಂದ ಈ ಕಾರ್ಯಕ್ರಮ ಜಾರಿಗೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾಂಗಲ್ಯವನ್ನು ತಾವು ಚಿನ್ನದಲ್ಲಿ ಮಾಡಿಸುತ್ತೀರೋ ಬೆಳ್ಳಿಯಲ್ಲಿ ಮಾಡಿಸುತ್ತೀರೊ, ಅದು ಎಷ್ಟು ಕ್ಯಾರೇಟ್ ಇರುತ್ತದೆ, ಯಾರ ಕೈಯಲ್ಲಿ ಮಾಡಿಸುತ್ತೀರಿ. ಅದರ ತೂಕ ಎಷ್ಟು ಇವೆಲ್ಲದರ ಬಗ್ಗೆ ತಾವು ಸ್ವಲ್ಪ ಹೇಳಬೇಕು.

ಶ್ರೀ ಮಾಲೀಕಯ್ಯ ಗುತ್ತೇದಾರ್ : ಮಾನ್ಯ ಉಪಾಧ್ಯಕ್ಷರೆ, ನಾವು ಮಾಂಗಲ್ಯವನ್ನು ಮಾಡಿಸುತ್ತಿಲ್ಲ, ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುವುದು ಇಷ್ಟೆ ಬಹಳಷ್ಟು ಬಡವರು ತಮ್ಮ ಮಗಳ ಮದುವೆ ಮಾಡಬೇಕಾದರೆ ಬಹಳಷ್ಟು ಕಷ್ಟ ಪಡಬೇಕಾಗುತ್ತದೆ. ಸರ್ಕಾರದಿಂದ ಸ್ವಲ್ಪ ಸಹಾಯವಾಗಲಿ ಎಂದು ತಂದೆ ತಾಯಿಗಳಿಗೆ 5,000 ರೂಪಾಯಿ ಪುಕ್ಕಟೆ ಕೊಡುತ್ತೀದ್ದೇವೆ. ಮರುಪಾವತಿ ಕೊಡತಕ್ಕಂತಹ ಕಾರ್ಯಕ್ರಮವಿಲ್ಲ. ಆ 5,000 ರೂಪಾಯಿ ಹಣದಲ್ಲಿ ಅವರು ಅವರ ಮನೆ ಮುಂದೆ ಮದುವೆ ಮಾಡುವುದಕ್ಕೆ ಅನುಕೂಲವಾಗುತ್ತದೆ. 5,000 ರೂಪಾಯಿ ಮಾಂಗಲ್ಯ ಯೋಜನೆಯಡಿಯಲ್ಲಿ ತಂದೆ ತಾಯಿಗಳಿಗೆ ಹಣ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹಣ ಕೊಟ್ಟರೆ ಮಾಂಗಲ್ಯ ಭಾಗ್ಯ ಆಗುವುದಿಲ್ಲ. ಹಣದ ಭಾಗ್ಯ ಆಗುತ್ತದೆ. ತಾಳಿ ಭಾಗ್ಯ ಎಂದರೆ ತಾಳಿ ಕೊಡಿಸಬೇಕು, ಸೀರೆ ಭಾಗ್ಯ ಎಂದರೆ ಸೀರೆ ಕೊಡಿಸಬೇಕು, ಪಂಚೆ ಭಾಗ್ಯ ಎಂದರೆ ಪಂಚೆ ಕೊಡಿಸಬೇಕು, ಶರ್ಟ್ ಭಾಗ್ಯ ಎಂದರೆ ಶರ್ಟ್ ಕೊಡಿಸಬೇಕು, ಇದು ಮಾಂಗಲ್ಯ ಭಾಗ್ಯ ಎಂದು ಇದೆ. ಹಣ ಕೊಡುವುದು ಯಾವ ಭಾಗ್ಯ ಇದು? ಇದು ಇದು ಬಹಳ ಪ್ರಾಮುಖ್ಯ. ಹಣ ಕೊಟ್ಟರೆ ಹೆಸರು ಇರಬಾರದು. 5,000 ರೂಪಾಯಿ ಭಾಗ್ಯ ಎಂದು ಇಡಲಿ. ಮಾಂಗಲ್ಯ ಭಾಗ್ಯ ಎಂದು ಇಡಬೇಕಾದರೆ ಮಾಂಗಲ್ಯವನ್ನೇ ಮಾಡಿಸಿ ಸರ್ಕಾರ ಕೊಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ವಾಟಾಳ್ ನಾಗರಾಜ್‌ರವರು ಮಾಂಗಲ್ಯ ಭಾಗ್ಯ ಎಂದರೆ ಮಾಂಗಲ್ಯ ಕೊಡಬೇಕು, ಹಣ ಕೊಡಬಾರದು ಎಂದು ಹೇಳುತ್ತಿದ್ದಾರೆ. ಅವರಿಗೂ ಗೊತ್ತಿದೆ, ಮಾಂಗಲ್ಯವನ್ನು ವಿಚಿತ್ರವಾಗಿ ಮಾಡಿಸುತ್ತಾರೆ. ಒಂದೊಂದು ವರ್ಗ ಒಂದು ಬಿಲ್ಲೆ ಇರುವ ಮಾಂಗಲ್ಯ, ಎರಡು ಬಿಲ್ಲೆ ಇರುವ ಮಾಂಗಲ್ಯ ಬೇರೆ ಬೇರೆ ರೀತಿಯಲ್ಲಿ ಮಾಂಗಲ್ಯವನ್ನು ಅವರ ನಂಬಿಕೆಗೆ ಆಧಾರವಾಗಿ ಮಾಡುತ್ತಾರೆ. ಆ ನಂಬಿಕೆಗೆ ನಾವು ಮಾಂಗಲ್ಯ ಮಾಡಿಸಿಕೊಡುವುದು ಬೇಕಾಗಿಲ್ಲ. ಮಾಂಗಲ್ಯವನ್ನು ಮಾಡಿಸಿಕೋಳ್ಳಲಿ ಎಂದು ನಾವು ಹಣ ಕೊಡುವುದು. ಮಾಂಗಲ್ಯ ಮಾಡಿಸಿ ಕೊಟ್ಟರೆ ಒಬ್ಬರು ಒಪ್ಪುತ್ತಾರೆ, ಒಬ್ಬರು ಒಪ್ಪುವುದಿಲ್ಲ. ಇದು ಸ್ಥಳೀಯವಾಗಿ ಆಗಿರತಕ್ಕಂತಹ ನಿದರ್ಶನಗಳಿವೆ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಇದ್ದಾಗ ತಾಳಿ ಭಾಗ್ಯ ಎಂದು ತಾಳಿಗಳನ್ನು ಮಾಡಿಸಿ ಕೊಟ್ಟಿದ್ದರು. ಇವರ ಸರ್ಕಾರದಲ್ಲಿ ತಾಳಿ ಭಾಗ್ಯ ಹೋದ ಮೇಲೆ ಮಾಂಗಲ್ಯ ಭಾಗ್ಯ ಬಂದಿದೆ.